# ಕಲರ್ ಡೈಮಂಡ್ಸ್ ಕಾಲ



**ಕಲರ್ ಡೈಮಂಡ್‌ನಲ್ಲಿ ಕಿವಿಯೋಲೆ, ಪೆಂಡೆಂಟ್, ಉಂಗುರ, ನೆಕ್ಲೇಸ್, ಬಳೆ ಮುಂತಾದ ಒಡವೆಗಳು ಲಭ್ಯ.. ಜರತಾರಿ ಸೀರೆ ಜತೆಗೆ ಈ ವರ್ಣರಂಜಿತ ವಜ್ರದ ಒಡವೆಗಳು ಅಂದವನ್ನು ಇಮ್ಮಡಿಸುತ್ತದೆ. ಜತೆಗೆ ಈ ಸಂಗ್ರಹದಲ್ಲಿ ಕಫ್ಲಿಂಗ್ಸ್, ಕಾಕ್‌ಟೈಲ್ ರಿಂಗ್, ಸ್ಟಡ್ ಮುಂತಾದ ವೈವಿಧ್ಯಗಳೂ ಕಣ್ಣುಕೋರೈಸುವಂತಿವೆ.**

**■ ಯು. ವೇಣೂರು**

ವಜ್ರದ ಆಭರಣಕ್ಕೆ ಸರಿಸಾಟಿಯಾದ ಆಭರಣ ಯಾವುದೂ ಇಲ್ಲ ಎಂಬುದು ಒಡವೆ ಪ್ರಿಯರ ಅಭಿಪ್ರಾಯ. ವಜ್ರದ ಉಂಗುರ, ಕಿವಿಯೋಲೆ, ನೆಕ್ಲೇಸ್‌ಗಳಿಗೆ ಇಂದಿನ ಫ್ಯಾಷನ್ ಪ್ರಪಂಚದಲ್ಲಿ ಎಲ್ಲಿಲ್ಲದ ಬೇಡಿಕೆ. ಒಂದೇ ಒಂದು ವಜ್ರದ ನೆಕ್ಲೇಸ್, ಒಂದೇ ಉಂಗುರ.. ಹೀಗೆ 'ಸಿಂಗಲ್‌ಪೀಸ್ ಆರ್ನಮೆಂಟ್' ಇಂದಿನ ಟ್ರೆಂಡ್ ಕೂಡ ಆಗಿದೆ.

ವೈವಿಧ್ಯಮಯ ವಿನ್ಯಾಸದ ವಜ್ರಾಭರಣ ಸಾಮಾನ್ಯವಾಗಿ ಶ್ರೀಮಂತ ವರ್ಗಕ್ಕೇ ಸೀಮಿತ. ಆದರೂ ಈಗ ಮಾರುಕಟ್ಟೆಯಲ್ಲಿ ಮಧ್ಯಮ ವರ್ಗಕ್ಕೂ ಸಿಗುವಂಥ ವಜ್ರಾಭರಣ ಲಭ್ಯ. ಶ್ರೀಮಂತ ಮಹಿಳೆಯರು, ಮಾಡೆಲ್‌ಗಳು, ಸಿನಿಮಾ ನಟಿಯರು ವಜ್ರದ ಆಭರಣಕ್ಕೆ ಹೆಚ್ಚು ಒಲವು ತೋರಿಸುತ್ತಿದ್ದಾರೆ. ಆದರೆ ಸಿರಿವಂತರ ಕಣ್ಣು ಯಾವತ್ತೂ ದುಬಾರಿ ಒಡವೆಗಳ ಮೇಲೆಯೇ. ಅದ್ದೂರಿ ಜರತಾರಿ ಸೀರೆ ಉಟ್ಟಾಗ ಅದಕ್ಕೊಪ್ಪುವ ಒಡವೆ ತೊಡದಿದ್ದರೆ ಹೇಗೆ? ಸೀರೆಗೆ ಮ್ಯಾಚಿಂಗ್ ಮಾಡಿಕೊಳ್ಳಲು ವಜ್ರದೊಡವೆಯೇ ಬೇಕು. ಈ ಗುಂಪಿನ ಮಹಿಳೆಯರ ಮನದಿಂಗಿತವನ್ನು ತೃಪ್ತಿ ಪಡಿಸಲು ಬಂದಿರುವುದು ತರಹೇವಾರಿ ವಿನ್ಯಾಸಗಳ ಬಣ್ಣಬಣ್ಣದ ವಜ್ರದ ಹರಳುಗಳು. ಈ ಕಲರ್ ಡೈಮಂಡ್ಸ್ ನೋಟಕ್ಕೆ ಆಕರ್ಷಕ, ಧರಿಸಿಕೊಂಡರೆ ಸಖತ್ ಲುಕ್.





ಸೀರೆಗೆ ಮ್ಯಾಚಿಂಗ್ ಮಾಡಿಕೊಳ್ಳಲು ರೂಬಿ. ಎಮರಾಲ್ಡ್, ಹವಳ, ಮುತ್ತಿನಂತಹ ಹರಳುಗಳಿಂದ ತಯಾರಿಸಿದ ಚಿನ್ನದ ಒಡವೆಗಳು ಲಭ್ಯವಾದರೂ ಇವೆಲ್ಲವೂ ವಜ್ರದ ಒಡವೆಯನ್ನು ಸರಿಗಟ್ಟುವುದಿಲ್ಲ ಎಂಬುದು ಫ್ಯಾಷನ್‌ಪ್ರಿಯರ ಅಭಿಮತ.

ಬಿಳಿ, ಹಳದಿ ಬಣ್ಣದ ವಜ್ರದ ಹರಳುಗಳು ಇದ್ದರೂ ಬಣ್ಣ ಬಣ್ಣದ ಹರಳುಗಳು ಇನ್ನೂ ಹೆಚ್ಚು ಮನಮೋಹಕ. ವಿವಿಧ ಶೈಲಿ, ಛಾಯೆಗಳಲ್ಲಿ ಸಿಗು ಈ ವಜ್ರದ ಹರಳುಗಳು ದುಬಾರಿ. ಕಂದು ಬಣ್ಣದ ವಜ್ರಕ್ಕೆ 'ಕೊಗ್ನಾಕ್ ಡೈಮಂಡ್' ಎಂದು ಹೆಸರು. ನೀಲಿ ಬಣ್ಣಕ್ಕೆ 'ಹೋಪ್ ಡೈಮಂಡ್', ಹಳದಿ ವಜ್ರಕ್ಕೆ 'ಕ್ಯಾನರಿ ಡೈಮಂಡ್' ಎಂದು ಕರೆಯಲಾಗುತ್ತದೆ. ಹಲವು ಜ್ಯುವೆಲ್ಲರಿ ಮಳಿಗೆಗಳು ಇದೀಗ ಕಲರ್ ಡೈಮಂಡ್ಸ್ ಒಡವೆಗಳನ್ನು ಮಾರಾಟಕ್ಕಿಟ್ಟಿದ್ದು ಪೈಪೋಟಿಯನ್ನೂ ನಡೆಸುತ್ತಿವೆ. ನವಿಲಿನ ವಿನ್ಯಾಸದ ಆಭರಣ ಗಮನ ಸೆಳೆಯುವಂತಿದೆ. ಜತೆಗೆ ನಾನಾ ವಿನ್ಯಾಸಗಳ ಒಡವೆಗಳು ಗ್ರಾಹಕರನ್ನು ಸೆಳೆಯುತ್ತಿವೆ.

ಕಲರ್ ಡೈಮಂಡ್‌ನಲ್ಲಿ ಕಿವಿಯೋಲೆ, ಪೆಂಡೆಂಟ್, ಉಂಗುರ, ನೆಕ್ಲೇಸ್, ಬಳೆ ಮುಂತಾದ ಒಡವೆಗಳು ಲಭ್ಯ. ಜರತಾರಿ ಸೀರೆ ಜತೆಗೆ ಈ ವರ್ಣರಂಜಿತ ವಜ್ರದ ಒಡವೆಗಳು ಅಂದವನ್ನು ಇಮ್ಮಡಿಸುತ್ತದೆ. ಜತೆಗೆ ಈ ಸಂಗ್ರಹದಲ್ಲಿ ಕಫ್ಸ್, ಕಾಕ್‌ಟೈಲ್ ರಿಂಗ್, ಸ್ಟಡ್ ಮುಂತಾದ ವೈವಿಧ್ಯಗಳೂ ಕಣ್ಣು ಕೋರೈಸುವಂತಿದೆ. ಈ ಒಡವೆಗಳ ಬೆಲೆ 50 ಸಾವಿರ ರೂಪಾಯಿಗಳಿಂದ ಆರಂಭ.

ಆಭರಣ ಜ್ಯುವೆಲ್ಲರಿ ಮಳಿಗೆ ವಧುವಿಗಾಗಿಯೇ ಹೊಸ ಶೈಲಿಯ ಆಭರಣ ಸಂಗ್ರಹವನ್ನು ಪರಿಚಯಿಸಿದೆ. ವಜ್ರದ ಹರಳಿನ ಜತೆ ಜತೆಗೇ ಕುಂದನ್, ಪೋಲ್ಕಿ, ಕೋಲ್ಕತ್ತಾ ಫಿಲಿಗ್ರಿ, ಡಿಸೈನರ್ ಆಂಟಿಕ್, ರೂಬಿ, ಎಮರಾಲ್ಡ್, ರಾಜ್‌ಕೋಟ್ ಮತ್ತು ಟೆಂಪಲ್ ಜ್ಯುವೆಲ್ಲರಿಗಳು ಆಭರಣ ಪ್ರಿಯರ ಮೆಚ್ಚು ಕೂಡ ಆಗಿದೆ.

'ವಜ್ರದಾಭರಣ ಸಂಗ್ರಹದಲ್ಲಿ ವಿಶೇಷವಾಗಿ ವಿನ್ಯಾಸಗೊಳಿಸಿದ ಒಡವೆಗಳೂ ಸಿಗುತ್ತವೆ. ಚಿನ್ನದ ಮೇಲೆ ವಜ್ರದ ಹರಳುಗಳು ಇಂದಿನ ಫ್ಯಾಷನ್‌ಗೆ ತಕ್ಕಂತೆ, ಮಹಿಳೆಯರ ಮನೋಭಿಲಾಷೆಗೆ ಪೂರಕವಾಗುವಂತೆ ಸಿಗುತ್ತಿದ್ದು, ಮಹಿಳೆಯರ ಒಡವೆ ಕನಸು ನನಸಾಗಿಸಿಕೊಳ್ಳಬಹುದು' ಎನ್ನುತ್ತಾರೆ ಫ್ಯಾಷನ್ ತಜ್ಞೆ ಸುನಿತಾ ಶೆಟ್ಟಿ.

ಮಹಿಳೆಯರ ಭಾವನೆ, ಹಣ ಹೂಡಿಕೆ, ಆಭರಣಗಳನ್ನು ಕೊಂಡು ತಮ್ಮದಾಗಿಸುವ ತವಕ, ಇವೆಲ್ಲದರ ಜತೆಗೆ ಫ್ಯಾಷನೆಬಲ್ ಆಗಿ ಕಾಣಬೇಕೆಂಬ ತುಡಿತ.. ಈ ಎಲ್ಲ ಇಂಗಿತವನ್ನು ಮಡಿಲಲ್ಲಿಟ್ಟುಕೊಂಡು ವಜ್ರದಲ್ಲಿ ವೈವಿಧ್ಯಮಯ ಮತ್ತು ವಿಭಿನ್ನ ವಿನ್ಯಾಸಗಳನ್ನು ನೀಡಲು ವಜ್ರಾಭರಣ ಮಳಿಗೆಗಳು ಪ್ರಯತ್ನಿಸುತ್ತಿವೆ. ವಜ್ರಾಭರಣದಲ್ಲಿ ನವಿಲಿನ ವಿನ್ಯಾಸ, ಸೆವೆನ್ ಸ್ಟೋನ್ ಡಿಸೈನ್ ಮುಂತಾದವು ಹೊಸ ಟ್ರೆಂಡ್. ಮದುವೆ ಸಂದರ್ಭಕ್ಕಾಗಿ ಮಲ್ಟಿಪರ್ಪಸ್ ಜ್ಯುವೆಲ್ಲರಿಗಳೂ ಈಗ ಲಭ್ಯ.

## ವಜ್ರದ ಆಭರಣದಲ್ಲಿ ಪರಿಶುದ್ಧತೆ

ಒಡವೆ ಚಿನ್ನದ್ದೇ ಆಗಿರಲಿ, ವಜ್ರದ್ದೇ ಆಗಿರಲಿ ಪರಿಶುದ್ಧತೆ ಮುಖ್ಯ. ಚಿನ್ನ ಕೊಳ್ಳುವಾಗ ಹಾಲ್‌ಮಾರ್ಕ್ ಇರುವ ಆಭರಣವನ್ನೇ ಆಯ್ಕೆ ಮಾಡಿಕೊಳ್ಳಬೇಕು. ವಜ್ರದಲ್ಲೂ ನಿಖರತೆ ಇರುವ ಪ್ರಮಾಣೀಕೃತ ಆಭರಣಕ್ಕೇ ಆದ್ಯತೆ ನೀಡಬೇಕು. ಚಿನ್ನದಾಭರಣದ ಪರಿಶುದ್ಧತೆಯನ್ನು ಖಚಿತಪಡಿಸಿಕೊಳ್ಳಲು ಕ್ಯಾರಟ್ ಮೀಟರ್ ಅನ್ನು ಬಳಸುತ್ತಾರೆ. ಗ್ರಾಹಕರು ಯಾವುದೇ ವೆಚ್ಚ ನೀಡದೆ ಒಡವೆಯ ಪರಿಶುದ್ಧತೆಯನ್ನು ಖಚಿತಪಡಿಸಿಕೊಳ್ಳಬಹುದು. ■

